# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ

---

**ಅ. ದಾ. ನಂ. 981/2016** **ದಿನಾಂಕ:19.12.2023**

**ಪಿ.ಡಬ್ಲ್ಯೂ: 01**

---

19.12.2023:ಸಾಕ್ಷಿಯನ್ನು ಈ ದಿನ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು :

***

<u>ಮುಂದುವರೆದ ಪಾಟೀ ಸವಾಲುಃ 5 ನೇ ಪ್ರತಿವಾದಿಯರ ಪರವಾಗಿಃ-</u>

ದಾವಾ ಆಸ್ತಿಗಳು ನಿಮ್ಮ ಪಿತ್ರಾರ್ಜಿತ ಆಸ್ತಿಗಳು ಎನ್ನುವ ಬಗ್ಗೆ ನೀವು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ತನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ತಂದೆ ಹೆಸರು ಬಸಪ್ಪ, ಸದರಿ ಬಸಪ್ಪನು, ಆತನ ತಂದೆಗೆ ಬೀಮಪ್ಪನಿಗೆ ಒಬ್ಬನೇ ಮಗ ಇರುತ್ತಾನೆ ಎಂದರೆ ಸರಿ. ನನ್ನ ತಂದೆಯ ಹೆಸರು ಹೈಬತ್ತಿ , ಆತನಿಗೆ ಮಲ್ಲವ್ವ , ಸತ್ಯವ್ವ ಮತ್ತು ಮೆಳೆವ್ವ ಅಂತಾ ಸಹೋದರಿಯರಿರುತ್ತಾರೆ, ಅವರೆಲ್ಲರೂ ಬಸಪ್ಪನ ಮಕ್ಕಳಿರುತ್ತಾರೆ. ಬಸಪ್ಪನ ಮಕ್ಕಳ ನಡುವೆ ಆಸ್ತಿಗಳ ಕುರಿತು ವಿಭಾಗವಾದ ಬಗ್ಗೆ ನಿಮ್ಮ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಬಸಪ್ಪನ ಮಕ್ಕಳ ನಡುವೆ ಆಸ್ತಿಗಳ ಕುರಿತು ವಿಭಾಗವಾದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಬಸಪ್ಪನ ಮಕ್ಕಳ ನಡುವೆ ವಿಭಾಗದ ಕುರಿತು ದಾವೆಯಲ್ಲಿ ಹೇಳಲು ನಿಮಗೆ ಅಡಚಣೆ ಇರಲಿಲ್ಲ ಎಂದರೆ ಸರಿ. ನನ್ನ ತಂದೆ ತೀರಿಕೊಂಡಾಗ ಮಕ್ಕಳೆಲ್ಲರೂ ಚಿಕ್ಕವರಿದ್ದರು. ನಿಮ್ಮ ಮದುವೆಗೆ ಮತ್ತು ನಿಮ್ಮ ಸಹೋದರರ ಶಿಕ್ಷಣಕ್ಕಾಗಿ ನಿಮ್ಮ ತಾಯಿ ಸಾಕಷ್ಟು ಸಾಲವನ್ನು ಮಾಡಿ ಖರ್ಚು ಮಾಡಿದ್ದರು ಎಂದರೆ ಸಾಕ್ಷಿಯು ಆಗ ಖರ್ಚೆ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮನೆಯಲ್ಲಿ ಗಂಡು ಮಕ್ಕಳು ಮಾತ್ರ ಶೇತ್ಕಿ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಜಮೀನುಗಳನ್ನು ಪಾಲುನಾತೆಯ ಮೇರೆಗೆ ಬೇರೆಯವರಿಗೆ ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಜಮೀನುಗಳಲ್ಲಿ ಸರಿಯಾಗಿ ಉತ್ಪನ್ನ ಬರದೇ ಇದ್ದುದರಿಂದ ಸಾಲವನ್ನು ಮಾಡಲಾಗಿರುತ್ತದೆ ಎಂದರೆ

ಸರಿಯಲ್ಲ. ಮನೆತನದ ಸಾಲವನ್ನು ತೀರಿಸಲು, ನಿಮ್ಮ ತಾಯಿ ಅಲ್ಪ ವಹಿ ಮಕ್ಕಳ ಪರವಾಗಿಯು ಆಸ್ತಿಯನ್ನು ಮಾರಾಟ ಮಾಡಲು G and WC 28/2019 ರಲ್ಲಿ ನ್ಯಾಯಾಲಯದಿಂದ ಪರವಾನಗಿ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ತಮಗೆ ಗೊತ್ತಿಲ್ಲದ ಹಾಗೆ ವಾರಸಾ ಮಾಡಿಕೊಂಡಿರುತ್ತಾರೆ ತಮಗೆ ಪಾಲು ಬೇಕು ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶ ಪಡೆಯುವ ಸಮಯದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನೀವು ದಿನಪತ್ರಿಕೆಯಲ್ಲಿ ಪ್ರಕಟ ಗೊಂಡ ವಿಷಯ ತಿಳಿದು ತಕರಾರು ಮಾಡಬಹುದಾಗಿತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ 29.05.2006 ರಲ್ಲಿ ತೀರಿಕೊಂಡಿರುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ನೀವು ಆಸ್ತಿಯಲ್ಲಿ ವಿಭಾಗ ಕೇಳಿಲ್ಲ ಎಂದರೆ ಸಾಕ್ಷಿಯು ತಮಗೆ ಗೊತ್ತಾದ ನಂತರ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಮತ್ತು 1 ರಿಂದ 4 ನೇ ಪ್ರತಿವಾದಿಯವರು ಜಂಟಿ ಕಬ್ಜ ವಹಿವಾಟಿನಲ್ಲಿರುತ್ತೀರಿ ಎಂದು ನೀವು ಸುಳ್ಳು ಹೇಳಿರುತ್ತೀರಿ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯಲ್ಲಿ ಯಾವತ್ತು ಕಬ್ಜ ವಹಿವಾಟಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ದಿನಾಂಕ 11.05.2011 ರಂದು ದಾವಾ ಆಸ್ತಿಯನ್ನು ಮಾರಾಟ ಮಾಡಿ , ನೊಂದಾಯಿತ ಕ್ರಯ ಪತ್ರವನ್ನು ಬರೆದುಕೊಟ್ಟು ಅದೇ ದಿನವೆ ದಾವಾ ಆಸ್ತಿಯ ಕಬ್ಜವನ್ನು 5 ನೇ ಪ್ರತಿವಾದಿಯರಿಗೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 11.05.2011 ರಿಂದ 5 ನೇ ಪ್ರತಿವಾದಿಯೇ ದಾವಾ ಆಸ್ತಿಯಲ್ಲಿ ಕಬ್ಜ ದಲ್ಲಿರುತ್ತಾನೆ ಎಂದರೆ ಸಾಕ್ಷಿಯು ತನ್ನ ತಮ್ಮಂದಿರು ಇರತ್ತಾರೆ ಎಂದು ನುಡಿಯುತ್ತಾರೆ. 2011 ರಲ್ಲಿ ಕ್ರಯ ಪತ್ರವಾದಾಗ ನಿಮಗೆ ದಾವೆ ದಾಖಲಿಸಲು ಅಡಚಣೆ ಇರಲಿಲ್ಲ ಎಂದರೆ ಸಾಕ್ಷಿಯು ತನಗೆ ಆ ಬಗ್ಗೆ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. 1 ರಿಂದ 4 ನೇ ಪ್ರತಿವಾದಿಯವರ ಹೆಸರು ದಾವಾ ಆಸ್ತಿಯ ಖಾತೆಯಲ್ಲಿ ಇದ್ದುದರಿಂದ , 5 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 1 ನೇ 4 ನೇ ಪ್ರತಿವಾದಿಯರ ಹೆಸರಿಗೆ

ಆದ ಖಾತೆಯನ್ನು ನೀವು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಕ್ಕದಲ್ಲಿ ನಿಮ್ಮದು ಇನ್ನೊಂದು ಆಸ್ತಿ ಇರುತ್ತದೆ ಎಂದರೆ ಸರಿ. 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯನ್ನು ಬಿಟ್ಟು ಉಳಿಕೆ ಆಸ್ತಿಯಲ್ಲಿ ನಿಮಗೆ ನ್ಯಾಯಾಲಯವು ಪಾಲು ನೀಡಿದರೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ತನಗೆ ಎಲ್ಲ ಆಸ್ತಿಯಲ್ಲೂ ಪಾಲು ಬೇಕು ಎಂದು ನುಡಿಯುತ್ತಾರೆ. ನಿಮಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ , 5 ನೇ ಪ್ರತಿವಾದಿಯರಿಗೆ ಆಗದವರ ಮಾತನ್ನು ಕೇಳಿ , ನೀವು ಸುಳ್ಳು ದಾವ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆಸ್ತಿಯ ಕುರಿತು ಯಾವುದೇ ಮಾಹಿತಿ ಇಲ್ಲದಿದ್ದರೂ, ಕಾಲ ಮಿತಿ ಮೀರಿ ದಾವೆ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ತನಗೆ ಗೊತ್ತಾದ ನಂತರ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ 2016 ರಲ್ಲಿ ಗೊತ್ತಾಯಿತು ಆಗ ದಾವೆ ಸಲ್ಲಿಸಿರುತ್ತೇನೆ. ಖರೀದಿ ಪತ್ರವನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯು ತನಗೆ ಖರೀದಿ ಪತ್ರ ತೋರಿಸಿಲ್ಲ ಎಂದು ನುಡಿಯುತ್ತಾರೆ. ಖರೀದಿ ಪತ್ರದಲ್ಲಿರುವ ಆಸ್ತಿಯ ಚೆಕ್ ಬಂದಿ ನೋಡಿಲ್ಲ ಕಾರಣ ನನಗೆ ಖರೀದಿ ಪತ್ರ ತೋರಿಸಿಲ್ಲ. ಖರೀದಿ ಪತ್ರಕ್ಕೆ ಯಾರು ಸಹಿ ಮಾಡಿ ಕೊಟ್ಟಿರುತ್ತಾರೆ ಮತ್ತು ಯಾರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಅಂತಾ ನಾನು ನೋಡಿಲ್ಲ ಕಾರಣ ಖರೀದಿ ಪತ್ರ ನನಗೆ ತೋರಿಸಿಲ್ಲ. ಖರೀದಿ ಪತ್ರ ಬಂಧನಕಾರಕ ಆಗುವುದಿಲ್ಲ ಅಂತಾ ನನಗೆ ಗೊತ್ತಾದ ನಂತರ ಕೇಳಿದ್ದೇನೆ. ದಾವಾ ಆಸ್ತಿಯ ಪೂರ್ವಕ್ಕೆ ಕವಟಕೊಪ್ಪ ರಸ್ತೆ , ಪಶ್ಚಿಮಕ್ಕೆ ಸಂಕ್ರಟ್ಟಿ ಸೀಮೆ, ಉತ್ತರಕ್ಕೆ ಅಣ್ಣಪ್ಪ ಚಿಪ್ಪಡಿ ರವರ ಜಮೀನು, ದಕ್ಷಿಣಕ್ಕೆ ರಂಗಪ್ಪರ ಜಮೀನು ಇರುತ್ತದೆ. 5 ನೇ ಪ್ರತಿವಾದಿಗೆ ಸದರಿ ಚೆಕ್ ಬಂದಿಯಲ್ಲಿರುವ 1 ನೇ ಹಿಸ್ಸೆಯ ಜಮೀನನ್ನು ಕ್ರಯಕ್ಕೆ ಕೊಟ್ಟಿರುತ್ತಾರೆ. ನನ್ನ ತಮ್ಮಂದಿರು ಕಬ್ಬನ್ನು ಬೆಳೆಯುತ್ತಾರೆ. 5 ನೇ ಪ್ರತಿವಾದಿ ಕ್ರಯಕ್ಕೆ ಪಡೆದಾಗಿನಿಂದಲೂ ಕಬ್ಬನ್ನು ಬೆಳೆಯುತ್ತಾನೆ ಎಂದರೆ ಸಾಕ್ಷಿಯು ಕಬ್ಬನ್ನು ಬೆಳೆಯುತ್ತಾರೆ ಎಂದು ನುಡಿಯುತ್ತಾರೆ. 5 ನೇ

ಪ್ರತಿವಾದಿ ನೀವು ಕ್ರಯಕ್ಕೆ ಪಡೆದ ಆಸ್ತಿಯನ್ನು ನೀವು ಪ್ರಶ್ನಿಸುವ ಹಕ್ಕನ್ನು ಹೊಂದಿರದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**4** ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿರುತ್ತಾರೆ ಆ ಕಾರಣ **4** ನೇ ಪ್ರತಿವಾದಿ ಪರ ವಕೀಲರ ಪರವಾಗಿ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ